ಮತದಾನ ಯಾರೂ ಮಾಡಿರಲಿಲ್ಲ.

ಉಪಾಧ್ಯಕ್ಷರು : ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡುವುದೇನೆಂದರೆ, ಈ ಸಣ್ಣ ಮಾತಿಗೆ ಏಕೆ ಡಿವಿಷನ್ ಮಾಡುತ್ತೀರಾ ?

ಶ್ರೀ ವಾಟಾಳ್ ನಾಗರಾಜ್ : ನೀವು ಸಣ್ಣ ವಿಚಾರವನ್ನು ಹಿಡಿದುಕೊಂಡು ಹೀಗೇಕೆ ಮಾಡುತ್ತಿದ್ದೀರಿ? ಅವರು ಹುಲಿಯನ್ನು ಹಿಡಿದುಕೊಳ್ಳಿ ಎಂದು ಹೇಳಿದರೆ, ನೀವು ಹೆಗ್ಗಣವನ್ನು ಹಿಡಿದುಕೊಂಡು ಹೊಡೆಯುತ್ತೀದ್ದೀರಲ್ಲಾ.

Sri. T.B. Jayachandra : We are unanimously insisting for division.

ಶ್ರೀ ಎಸ್. ಸುರೇಶ್‌ಕುಮಾರ್ : ಡಿವಿಷನ್ ಮಾಡಬೇಕೆಂದು ನಾವೆಲ್ಲರೂ ಯುನಾನಿಮಸ್ ಆಗಿ ಹೇಳುತ್ತಿದ್ದೇವೆ.

ಉಪಾಧ್ಯಕ್ಷರು : ಡಿವಿಷನ್ ಬೇಕೇ?

ಶ್ರೀ ಟಿ. ಬಿ. ಜಯಚಂದ್ರ : ಡಿವಿಷನ್ ಆಗಲೇ ಬೇಕು.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಅವರಿಗೆ ಹ್ಯುಮಿಲಿಯೇಟ್ ಮಾಡಬೇಕೆನ್ನುವ ದೃಷ್ಟಿಯಿಂದ ಡಿವಿಷನ್ ಮಾಡಿ ಎಂದು ಹೇಳುತ್ತಿಲ್ಲ. ಇದು ತತ್ವದೃಷ್ಟಿಯಿಂದ ಇರುವುದರಿಂದ ನಾವು ವಿರೋಧ ಮಾಡುತ್ತಿದ್ದೇವೆ. ಇವತ್ತು ಏನೂ ಕೆಲಸ ಇಲ್ಲದಿದ್ದರೂ ಒಂದು ಕ್ಯಾಬಿನೆಟ್ ರ್ಯಾಂಕ್‌ನ್ನು ಕೊಡುವುದಕ್ಕೆ ತಾವು ನಿರ್ಣಯವನ್ನು ತೆಗೆದು ಕೊಂಡಿದ್ದೀರಿ. 50 ವರ್ಷವಾದ ನಂತರ, 63 ಆ್ಯಕ್ಟ್ ಆದ ಮೇಲೆ ಪ್ರಪ್ರಥಮವಾಗಿ ನಾವು ಅಪಾಯಿಂಟ್ ಮಾಡುತ್ತಿದ್ದೇವೆ. ಏನಾದರೂ ನೆಸೆಸಿಟಿ ಇದ್ದರೆ ಕ್ಯಾಬಿನೆಟ್ ಬಹಳ ಕಾಂಪ್ಯಾಕ್ಟ್ ಇದ್ದು ಅಥವಾ ಅವಶ್ಯಕತೆ ಇದೆ ಎಂದು ಮುಖ್ಯಮಂತ್ರಿಗಳು ಮಾಡಿಕೊಂಡಿದ್ದರೆ ಯಾರಾದರೂ ಒಪ್ಪಬಹುದು. ಆದರೆ ಈಗಿರತಕ್ಕಂಥ ಮಂತ್ರಿಗಳಿಗೆ ಕೆಲಸವಿಲ್ಲ. ಈಗಾಗಲೇ ಅನೇಕ ಮಂತ್ರಿಗಳು ಅಟ್ಯಾಚ್ ಟು ಚೀಫ್ ಮಿನಿಸ್ಟರ್ ಇದ್ದಾರೆ. ರೈಟ್ ಫ್ರಮ್ ಅನಂತನಾಗ್ ಟು ರೋಷನ್‌ಬೇಗ್‌ನವರಿಗೆ ಎಲ್ಲರೂ ಕೂಡ ಅಟ್ಯಾಚ್ ಇದ್ದಾರೆ. ಸೋ ಮೆನಿ ಅಟ್ಯಾಚ್ ಇದ್ದ ಮೇಲೆ ಪುನಃ ಇನ್ನೊಂದು ಪಾರ್ಲಿಮೆಂಟರಿ ಸೆಕ್ರೆಟರಿಯ ಅವಶ್ಯಕತೆ ಬೇಕಾಗಿರಲಿಲ್ಲ.

ಇವತ್ತು ಇಷ್ಟೊಂದು ಮಂತ್ರಿಗಳಿಗೆ ಕೆಲಸವನ್ನು ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಸಹ ಇನ್ನೊಂದು ಪಾರ್ಲಿಮೆಂಟರಿ ಸೆಕ್ರೆಟರಿಯನ್ನು ಮಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ನಗೆಪಾಟಲಿಗೆಯನ್ನು ಮಾಡಿದಂತಹ ಕೀರ್ತಿ ಇವರಿಗೆ ಹೋಗುತ್ತದೆ. ನಿಜವಾಗಿಯೂ ಇದು ಆಗಬಾರದಾಗಿತ್ತು. ತಾವು ಈಗಾಗಲೇ ಹೇಳಿದ ಪ್ರಕಾರ ಡಿವಿಷನ್ ಮಾಡತಕ್ಕಂಥ ಅವಶ್ಯಕತೆ ಇಲ್ಲವೆಂದು ಹೇಳಿದ್ದೀರಿ, ಅದಕ್ಕೆ ನಾವು ಡಿವಿಷನ್‌ಗೆ ಇನ್‌ಸಿಸ್ಟ್ ಮಾಡುವುದಿಲ್ಲ. ಆದರೆ, ಇವರು ಮಾಡಿದಂತಹ ಕೆಲಸಕ್ಕೆ ಮತ್ತು ಕ್ಯಾಬಿನೆಟ್ ಸ್ಟೇಟ್ಸ್‌ನ್ನು ಕೊಡಬೇಕೆಂದು ಇವರು ಏನು ಇನ್‌ಸಿಸ್ಟ್ ಮಾಡುತ್ತಿದ್ದಾರೆ, ಇದನ್ನು ನಾವು ವಿರೋಧ ಮಾಡಿ, ಪ್ರತಿಭಟಿಸಿ ವಾಕ್ ಔಟ್ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಇದರ ವಿರುದ್ಧವಾಗಿ ನಾನು ಸಹ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಕಾಂಗ್ರೆಸಿನ ಸದಸ್ಯರು ಮತ್ತು ಮಾನ್ಯ ವಾಟಾಳ್‌ನಾಗರಾಜ್ ರವರು ಸಭಾತ್ಯಾಗ ಮಾಡಿದರು)